International Journal of Kannada Research
www.kannadajournal.com

ISSN: 2454–5813
IJKR 2020; 6(3): 71-73
© 2020 IJKR
www.kannadajournal.com
Received: 01-05-2020
Accepted: 03-06-2020

**ಡಾ. ಬಿ. ಪಿ. ಮಠದ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಧಾರವಾಡ

**Corresponding Author:**
**ಡಾ. ಬಿ. ಪಿ. ಮಠದ**
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಧಾರವಾಡ

# ಸಂತಕವಿ ಕನಕದಾಸರು

**ಡಾ. ಬಿ. ಪಿ. ಮಠದ**

ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾಗಿ ಮತ್ತು ಸಮಾಜಸುಧಾರಕರಾಗಿ ಕನ್ನಡನಾಡಿನ ಜನಜೀವನದಲ್ಲಿ ಒಂದಾಗಿ ಹೋಗಿರುವ ಕನಕದಾಸರ ಜೀವನ ಹಾಗೂ ಸಾಹಿತ್ಯವು ಎಲ್ಲ ಕಾಲಕ್ಕೂ ಅನುಕರಣೀಯವಾದದ್ದು ಹಾಗೂ ಅಧ್ಯಯನ ಯೋಗ್ಯವಾದದ್ದು. 'ಮೋಹನ ತರಂಗಿಣಿ', 'ರಾಮಧಾನ್ಯ ಚರಿತೆ', 'ನಳಚರಿತ್ರೆ', 'ಹರಿಭಕ್ತಸಾರ' ಮುಂತಾದ ವಿಶಿಷ್ಟಪೂರ್ಣ ಕ್ರತಿಗಳನ್ನು ಕನ್ನಡಕ್ಕೆ ಕೊಡುವುದಲ್ಲದೆ ತಮ್ಮ ನುರಾರು ಹಾಡು, ಕೀರ್ತನೆಗಳು ಜನರ ನಾಲಿಗೆಯ ಮೇಲೆ ಸದಾ ಇರುವಂತೆ ನೊಡಿಕೊಂಡು ಕನಕದಾಸರು ಕನ್ನಡದ ಜನಮಾನಸದಲ್ಲಿ ಸದಾಕಾಲ ನೆಲೆಸಿರುವ ಕವಿಯಾಗಿದ್ದಾರೆ. 'ಆತ್ಮ ಯಾವ ಕುಲ, ಜೀವ ಯಾವ ಕುಲ' ಎಂದು ಹಾಟಡಿದ ಅವರು ಕನ್ನೆಡದ ಒಬ್ಬ ಶ್ರೇಷ್ಠ ಕವಿ ಆಗಿರುವಂತೆಯೇ ಅಪರೂಪದ ಭಕ್ತಕವಿಯಾಗಿ, ಸಂತಕವಿಯಾಗಿ ಮತ್ತು ಅನುಭಾವ ಕವಿಯಾಗಿ ನಾನಾ ನೆಲೆಗಳಲ್ಲಿ ಗುರುತಿಸಲ್ಪಟ್ಟಿದ್ದಾರೆ. ಆಧ್ಯಾತ್ಮದ ಸಾರ ಮತ್ತು ಸಮಾಜಮುಖಿ ಚಿಂತನೆಗಳನ್ನು ಒಳಗೊಂಡಿರುವ ಅವರ ಕಾವ್ಯ ಬಹುಮುಖಿ ಆಯಾಮಗಳನ್ನು ಹೊಂದಿದೆ.

ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಬಿರಪ್ಪ ಮತ್ತು ಬಚ್ಚಮ್ಮ ಎಂಬ ದಂಪತಿಗಳಿಗೆ "1508ರಲ್ಲಿ ಜನಿಸಿದ ಕನಕದಾಸರು ಸುಮಾರು 98 ವರ್ಷಗಳಷ್ಟು ದೀರ್ಘ ಬದುಕನ್ನು ಬದುಕಿ, ನಾಡಿನ ಸಂಸ್ಕೃತಿ ಮತ್ತು ಸಾಹಿತತ್ಯದ ಮುನುರುತ್ತಾನಕ್ಕೆ ಕಾರಣರಾದರು. ಸಾಮಾನ್ಯವಾಗಿ ಕನಕದಾಸರ ಕಾಲವನ್ನು 1508 ರಿಂದ 1606 ಎಂದು ವಿದ್ವಾಂಸರು ಗುರುತಿಸಿದ್ದಾರಂ"[1]. ಕನಕದಾಸರು ದಾಸಪಂಥದ ಒಬ್ಬ ಕವಿಯಾಗಿ ತಮ್ಮ ಕಾವ್ಯೋದ್ಯೋಗವನ್ನು ಪ್ರಾರಂಭ ಮಾಡಿದರೂ ಬಲುಬೇಗನೆ ಅವರು ತಮ್ಮ ಕಾವ್ಯದ ಆಶಯ ಮತ್ತು ತಾತ್ವಿಕತೆಗಳನ್ನು ವಿಸ್ತಾರಗೊಳಿಸಿಕೊಂಡರು. ಮನುಷ್ಯನ ಕುಲ–ಮತಗಳನ್ನು ಎಣಿಸದೆ ಅವರು ಎಲ್ಲರಿಗೂ ಹಿಡಿಸುವಂತಹ ಮತ್ತು ಎಲ್ಲ ಜನರನ್ನೂ ತಲುಪುವಂತಹ ಕಾವ್ಯ ಸೂಷ್ಟಿಗೆ ಮುಂದಾದರು. ತಮ್ಮ ಕಾವ್ಯದ ಉದ್ದಕ್ಕೂ ಅವರು ಭಾವತೀವ್ರತೆಯ ಜೊತೆಗೆ ಸಾಮಾಜಿಕ ಸಂಗತಿಗಳನ್ನು ಬೆರೆಸಿಕೊಂಡ ಕಾರಣ ಆ ಹೊತ್ತಿನ ಕಲಧರ್ಮ ಮತ್ತು ಅದರ ತಲ್ಲಣಗಳನ್ನು ಪ್ರತಿನಿಧಿಸುವ ಒಬ್ಬ ವಿಶಿಷ್ಟ ಕವಿಯಾಗಿ ರೂಪುಗೊಂಡರು. ಅವರು ಬರೀ ಭಕ್ತಿ ಮಾರ್ಗದ ಕೀರ್ತನಕಾರರಾಗಿ, ಗೀತರಚನೆಕಾರರಾಗಿ ಇರಲು ಇಷ್ಟಪಡದೆ ವಸ್ತು ನಿಷ್ಠವಾದ, ಭಾವನಿಷ್ಠವಾದ ಮತ್ತು ಸಾಮಾಜಿಕತೆಗಳನ್ನು ಒಳಗೊಂಡ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ ಮತ್ತು ನಳಚರಿತ್ರೆಯಂತಹ ಕೃತಿಗಳನ್ನು ಬರೆದರು. ಅಂದರೆ ಅವರ ಕಾವ್ಯದ ವಿಸ್ತಾರ ಬಲು ವಿಶಾಲವಾದುದು. ಅವರು ಏನೇ ಬರೆದರೂ ಅದು ಮಾನವಯ ಅಂಶಗಳನ್ನು ಮತಜ್ಜು ಮನುಷ್ಯ ಜೀವನದ ಪ್ರೀತಿ–ಪ್ರೇಮಗಳನ್ನು ಪ್ರತಿಷ್ಠಾಪಿಸುವ ಕೆಲಸ ಮಾಡುತ್ತದೆ.

ಕನಕದಾಸರು ಹಾವೇರಿ ಜಿಲ್ಲೆಯ ಬಾಡದಲ್ಲಿ ಹಿಂದುಳಿದ ಜಾತಿಯೆಂದು ಪರಿಗಣಿತವಾಗಿದ್ದ ಕುರುಬ ದ ಸಮುದಾಯದಲ್ಲಿ ಹುಟ್ಟಿದವರೆಂದು ಈಗಾಗಲೇ ಅನೇಕ ಅಭ್ಯಾಸಗಳಿಂದ ಸಾಬೀತಾಗಿದೆ. ಬಾಡ, ವಿಜಯನಗರ ಮತ್ತು ಕಾಗಿನೆಲೆಗಳಲ್ಲಿ ಜೀವನವನ್ನು ಕಳೆದಿರುವ ಲಮಲದಾಸರಿ ತಮ್ಮ ಬಾಲ್ಯದ ಶಿಕ್ಷಣವನ್ನು ಆನೆಗೊಂದಿಯ ತಾತಾಚಾರ್ಯರ ಶ್ರೀ ಮಠದಲ್ಲಿ ಪಡೆದರು. ಕನಕದಾಸರು ವ್ಯಾಸರಾಯರ ಹತ್ತಿರ ಪಾರಮಾರ್ಥಿಕವನ್ನು ಅಭ್ಯಾಸ ಮಾಡುತ್ತಿರುವಾಗ ಸಂಭವಿಸಿದವೆನ್ನಲಾಗುವ ಕೆಲವು ದಂತಕಥೆಗಳು ಕೂಡ ಅವರು ಪಡೆದುಕೊಂಡಿರುವ ದೈವಿಕ ಅನುಭೂತಿಯನ್ನು ವಿವರಿಸುತ್ತವೆ. ಒಂದು ಸಲ ಗುರುಗಳು ಶಿಷ್ಯರಿಗೆ ಬಾಳೆಹಣ್ಣು ಕೊಟ್ಟು ಯಾರೂ ಇರದ ಜಾಗದಲಿಲ ತಿಂದು ಬನ್ನಿ ಎಂದು ಹೇಳಿದಾಗ ಕನಕದಾಸರು ತನ್ನದೆ ಬಂದಿರುತ್ತಾರೆ. ಎಲ್ಲ ಕಡೆಯೂ ದೇವರು ಹಾಜರಿರುವಾಗ, ಅವನು ಸರ್ವಾಂತರಯಾಮಿ ಆಗಿರುವಾಗ ಅವನನ್ನು ತಪ್ಪಿಸಿ ಹಣ್ಣು ತಿನ್ನುವುದಾಗಲಿ, ಏನೇ ತಿನ್ನುವುದಾಗಲಿ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳುತ್ತಾರಂತೆ. ಅದಕ್ಕಾಗಿಯೇ ಅವರು ಮನುಷ್ಯನ ಭಾವ–ಬುದ್ಧಿಗಳೆರಡೂ ದೇವರಿಂದ ಬಿಟ್ಟಿರಲು ಸಾಧ್ಯವಿಲ್ಲವೆಂದರು.

ಜಗತ್ತು ದೇವನಿಂದ ಸೃಷ್ಟಿಸಲ್ಪಟ್ಟ ಮಾಯೆಯಾಗದೆ. ಕನಕದಾಸರು ತಮ್ಮ ಬದುಕಿನುದ್ದಕ್ಕೂ ಅನೇಕ ಸಂಘರ್ಷ ಮತ್ತು ಮುಖಾಮುಖಿಗಳನ್ನು ಎದುರಗೊಳ್ಳಬೇಕಾಗಿ ಬಂದಿತು. ಅವರ ಪ್ರತಿಭೆಯನ್ನು ಒರೆಗೆ ಹಚ್ಚುವ ಅನೇಕ ಸಂದರ್ಭಗಳನ್ನು ಒಡ್ಡಲಾಗುತ್ತಿತ್ತು. ಕನಕರ ಪ್ರತಿಭೆ–ಪಾಂಡಿತ್ಯಗಳನ್ನು ಕಂಡು ಅಸೂಯೆಪಡುತ್ತಿದ್ದ ಕೆಲವು ಸಂದರ್ಭಗಳನ್ನು ಪುರಂದರದಾಸರೆ ಒಂದು ಕಡೆ ಹೇಳಿದ್ದನ್ನು ಡಾ.ಜಿ.ಎಸ್.ಶಿವರುದ್ರಪ್ಪ ಅವರು ಉಲ್ಲೇಖಿಸಿದ್ದಾರೆ.

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದೂ ಬಲ್ಲಿರಾ?॥
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ॥

ಎಂದು ಪ್ರಶ್ನೆ ಮಾಡುವುದರ ಮೂಲಕ ಕನಕದಾಸರು ತಮ್ಮ ಪ್ರತಿಭಟನೆಯನ್ನು ದಾಖಲು ಮಾಡುತ್ತ, ತಮ್ಮ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತಾರೆ. ಕನಕದಾಸರು ಎದುರಿಸಿದ ಕಷ್ಟಕೋಟಲೆಗಳು ಒಂದು ರೀತಿಯಲ್ಲಿ ಅವರ ತಾತ್ವಿಕ ತಳಹದಿಯನ್ನು ವಿಶಾಲಗೊಳಿಸಿದವೆಂದೇ ಹೇಳಬೇಕು. ಇದೇ ಅವರನ್ನು ಪುರಂದರದಾಸರ ಸಾಹಚರ್ಯ ಕನಕರಿಗೆ ಉತ್ಸಾಹವನ್ನು ಕೊಟ್ಟಿತು.

ಕಲಹ, ದ್ವೇಷ, ಯುದ್ಧಗಳು ತರುವ ದುಃಖ – ದುಮ್ಮಾನಗಳು ಅವರಿಗೆ ಬೇಸರ ತರಿಸಿರಲಿಕ್ಕೆ ಸಾಕು. ಕನಕದಾಸರು ಎಲ್ಲ ಮತಗಳನ್ನು ಮೀರಿ ಎಲ್ಲ ಮತಗಳ ಶ್ರೇಷ್ಠ ಸಾರವನ್ನು ಬಳಸಿಕೊಂಡು ತಮ್ಮ ವಿಚಾರಗಳನ್ನು ಉದಾತ್ತೀಕರಿಸಿಕೊಂಡರು. ಸಾಮಾನ್ಯ ಜನತಗೂ ತಲುಪುವಂತೆ ಹಳೆ ಮತ್ತು ಹೊಸ ಕಾವ್ಯ ಮತ್ತು ಹಾಡು – ಕೀರ್ತನೆಗಳನ್ನು ಬರೆದರು. ಭಗವಂತನ ನಾಮ ಸ್ಮರಣೆಯಿಂದ ಭವದ ಹಂಗನ್ನು ಹರಿದುಕೊಳ್ಳುವ, ಸನ್ಮಾರ್ಗದಲ್ಲಿ ನಡೆಯುವ ಬಗೆಗಳನ್ನು ತಿಳಿಸಕೊಟ್ಟರು.

ಕನಕದಾಸರ ಕೀರ್ತನೆಗಳು ಇಡೀ ಸಮಾಜಕ್ಕೆ ಬೋಧೆಯಾಗಿವೆ. ಅಂದರೆ ಅವು ಸಮಾಜಕ್ಕೆ ಅರಿವನ್ನು, ಎಚ್ಚರವನ್ನು ಅರಳುವಿಕೆಯ ಗುಣವನ್ನು ಕಲಿಸಿಕೊಡುತ್ತವೆ. ಅಷ್ಟೇ ಅಲ್ಲ, ಜೀವಚೈತನ್ಯವನ್ನು ಹಿಗ್ಗಿಸಿಕೊಳ್ಳಬೇಕಾದ ದಾರಿಯನ್ನು ಕೂಡ ಕನಕದಾಸರ ಈ ಹಾಡುಗಳು ಹೇಳಿಕೊಡುತ್ತವೆ. ಮನುಷ್ಯರಲ್ಲಿರುವ ಭೌತಿಕ ಸುಖ–ಸಂಪತ್ತಿನ ಲಾಲಸೆಯನ್ನು ದೂರ ಮಢಿ ಅವರಲ್ಲಿ ಭಕ್ತಿಯ ಭಾವವನ್ನು ಉದ್ದೀಪಿಸುವಂತಹ ಕೆಲಸವನ್ನು ಇವು ಮಾಡುತ್ತವೆ. ಕನಕರಲ್ಲಿ ಕೀರ್ತನೆಗಳಲ್ಲಿ ಏಕತಾನತೆ ಕಂಡು ಬರದೆ ಅವರುಉ ಅನುಭವ ಭೀತಿಯಲ್ಲಿ ಮೂಡಿಬರುವ ಹಲವು ವೈವಿಧ್ಯಮಯ ಚಿತ್ರಗಳು ಅಲ್ಲಿ ಹಾದುಹೋಗುತ್ತವೆ. ಕನಕದಾಸರಿಗೆ ವಿಶಾಲ ಜೀವನ ಪ್ರಪಂಚದ ಅರಿವಿದೆ. ವೃತ್ತಿಬದುಕಿನ ಅನುಭವ, ಸಮಾಜದ ಜೊತೆ ಅವರು ನಡೆಸಿದ ಹೋರಾಟ, ಜ್ಞಾನವನ್ನು ಸಂಪಾದಿಸಬೇಕಾದಾಗ ಎದುರಿದ ಸಂಕಷ್ಟ–ಹೀಗೆ ಸಂಘರ್ಷ ಮತ್ತು ಸಾಮರಸ್ಯದ ಬದುಕಿನ ನೂರಾರು ಅನುಭವಗಳನ್ನು ಅವರು ಹಾಡು – ಕೀರ್ತನೆಗಳಲ್ಲಿ ಅಭಿವ್ಯಕ್ತಿಸಬೇಕಾಗಿ ಬಂದಿತು. ಅದಕ್ಕೆ ತಕ್ಕ ಹಾಗೆ ಜೀವನ ಸಮುದ್ರದಿಂದ ಆಯ್ದ ಪ್ರತಿಮೆ, ರೂಪಕಗಳನ್ನೆ ಅವರು ತಮ್ಮ ಗೀತೆಗಳಲ್ಲಿ ಬಳಸುವುದರಿಂದ ಒಂದು ತೆರನಾದ ಅಧಿಕೃತತೆ ಮತ್ತು ಪಾರದರ್ಶಕತೆ ಅವರ ಕಾವ್ಯಕ್ಕೆ ಒದಗುತ್ತದೆ. ಭಕ್ತಿ ಅನುಭಾವ, ವಿನೀತ ಜೀವನ ರೀತಿ, ದಾಸಭಾವ ಮುಂತಾದ ಗುಣಗಳು ಅವರ ಕೀರ್ತನೆಗಳಲ್ಲಿ ಕಾಣಿಸಿಕೊಂಡಿರುವುದನ್ನು ಹಲವು ಉದಾಹರಣೆಗಳ ಮೂಲಕ ನಾವು ನೋಡಬಹುದಾಗಿದೆ.

ಕರುಣಾಮಯಿಯಾದ ಭಗವಂತ ಎಲ್ಲರನ್ನು ಕಾಪಾಡುತ್ತಾನೆ. ಬೆಟ್ಟದ ತುದಿಯಲ್ಲಿರುವ ಮರಕ್ಕೆ, ಕಾಡಿನ ಮೃಗಪಕ್ಷಿಗಳಿಗೆ, ಕಲ್ಲಿನೊಳಗೆ ಹುಟ್ಟಿ ಕೂಗುತ್ತಿರುವ ಕಪ್ಪೆಗಳಿಗೆ ನೀರು ಆಹಾರಾದಿಗಳನ್ನು ಒದಗಿಸಿದವನು ದೇವರಲ್ಲದೆ ಮತ್ತ್ಯಾರೂ ಅಲ್ಲ ಎಂದು ಕನಕದಾಸರು ಭಗವಂತನಲ್ಲಿ ನಂಬಿಕೆ ಇಡಲು ಕೇಳಿಕೊಳ್ಳುತ್ತಾರೆ. ನಂಬಿಕೆಯೇ ಎಲ್ಲ ಜೀವಿಗಳ ವಿಕಾಸದ ಮಂತ್ರವಾಗಿದೆ ಎಂಬ ಅಭಿಪ್ರಾಯವನ್ನು ಅವರು ತಾಳಿರುವುದನ್ನು ಇಲ್ಲಿ ನೋಡಬಹುದು. ನಾವು ವೃಥಾ ತಲ್ಲಣಿಸಬಾರದು. ಇದರರ್ಥ ಕೆಲಸ ಮಾಡದೆ ಸುಮ್ಮನಿರಬೇಕು ಎಂದಲ್ಲ. ಅನಗತ್ಯ ಚಿಂತೆಯನ್ನು ತೊರೆಯಬೇಕು ಎಂಬುದು ಇಲ್ಲಿ ನಿರೂಪಿತವಾಗಿದೆ:

"ತಲ್ಲಣಿಸಿದರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ.
ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಕಲ್ಲಿನಲಿ ಹುಟ್ಟಿ ತಾ ಕೂಗುವ ಕಪ್ಪೆಗೆ
ಅಲ್ಲಿ ಆಹಾರವನು ತಂದೀಯುವವರ್ಯಾರೋ
ಬಲ್ಲಿದನು ಕಾಗಿನೆಲೆಯಾದಿ ಕೇಶವ ರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ"[2]

ಆಲಯ ಮತ್ತು ಬಯಲು – ಇವುಗಳ ಸಂಬಂಧ ಅನಾದಿಯಾದದ್ದು, ವಿಸ್ಮಯ ಮೂಡಿಸುವಂತಹದು. ಅವುಗಳನ್ನು ಒಂದರಿಂದ ಮತ್ತೊಂದನ್ನು ಬೇರ್ಪಡಿಸಿ ನೋಡುವುದು ಅಸಾಧ್ಯವೇ ಸರಿ ಎನ್ನಬೇಕು. ಅದರಂತೆ ದೈವ ಮತ್ತು ಮಾಯೆ, ಮನುಷ್ಯನ ದೇಹ ಮತ್ತು ಅದರೊಳಗಿರುವ ಜೀವ – ಆತ್ಮ ಇವುಗಳನ್ನು ಕೂಡ ವ್ಯತ್ಯಾಸ ಮಾಡಿ ನೋಡುವಂತಹುದು ಕಷ್ಟ, ಸಕ್ಕರೆಯಲ್ಲಿ ಸವಿಯಿದೆಯೋ–ಸವಿಯಲ್ಲಿ ಸಕ್ಕರೆಯಿದೆಯೋ, ರುಚಿ ನಾಲಿಗೆಯಲ್ಲಿದೆಯೋ ಇಲ್ಲವೆ ಮನಸ್ಸಿನಲ್ಲಿ ಮೂಡುತ್ತದೆಯೋ, ಪರಿಮಳ ಹೂವಿನಲ್ಲಿದೆಯೋ ಇಲ್ಲವೆ ಹೂವು ಪರಿಮಳದಲ್ಲಿದೆಯೋ ಎನ್ನುವುದು ಬೀಜ–ಮರದಂತೆ ಉತ್ತಗಳಿಲ್ಲದ ಪ್ರಶ್ನೆಗಳಂತೆ ಸದಾ ಕಾಡುತ್ತವೆ ಎಂದು ಕನಕದಾಸರು ವಿಸ್ಮಯ ವ್ಯಕ್ತಪಡಿಸುವುದು ತುಂಬ ಸಮಂಜಸವಾಗಿದೆ:

ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ
ನೀ ದೇಹದೊಳಗೋ ನಿನ್ನೊಳು ದೇಹವೋ ಹರಿಯೆ
ಬಯಲೊಳಗೆ ಆಲಯವೋ ಆಲಯದೊಳಗೆ ಬಯಲೊ
ಬಯಲು ಆಲಯವೆರಡು ನಯನದೊಳಗೋ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ ಒಲಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ
ಸವಿಯು ಸಕ್ಕರೆಯೊಳಗೊ ಸಕ್ಕೆಯು ಸವಿಯೊಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ

ಕನಕದಾಸರು ಮೈಕುಂಠ ಅನ್ನುವುದು ನಮ್ಮ ದೃಷ್ಠಿಯಂತೆ ಇದೆ. ಆಧ್ಯಾತ್ಮದ ದಾರಿ ದೂರವೇನಲ್ಲ ಎಂದು ಹೇಳುತ್ತಾರೆ:

ಇಷ್ಟು ದಿನ ಈ ಮೈಕುಂಠ
ಎಷ್ಟು ದೂರವೊ ಎನ್ನುತಲಿದ್ದೆ
ದೃಷ್ಟಿಯಿಂದಲಿ ನಾನು ಕಂಡೆ
ಸೃಷ್ಟಿಗೀಶನೆ ಶ್ರೀರಂಗಶಾಯಿ

ದೇವ, ನನ್ನನ್ನು ಭ್ರಷ್ಟನೆನಿಸಿಕೊಳ್ಳಲು ಅವಕಾಶ ಕೊಡದೆ ಸನ್ಮಾರ್ಗದಲ್ಲಿ ನಡೆಯಲು ಪ್ರೇರೆಪಿಸು ಎಂದು ಭಕ್ತನಾದವನು ಬೇಡಿಕೊಳ್ಳಬೇಕಾಗುತ್ತದೆ ಎಂದು ಕನಕದಾಸರು ತಿಳಿಸುತ್ತಾರೆ. ಮನುಷ್ಯರು ಬುದ್ಧಿಶೂನ್ಯರಾಗದೆ, ಹುಸಿಯ ನುಡಿಯದೆ, ಕಾಮಕ್ರೋಧಗಳಿಗೆ ಮನಸ್ಸನ್ನು ಬಲಿಕೊಡದೆ ಸದಾ ಭಗವಂತನ ಸ್ಮರಣೆಯಲ್ಲಿ ಕಾಲ ಕಳೆಯುವಂತೆ ಇರಲು ಮನಸ್ಸು ಮಾಡಬೇಕೆಂಬ ಆಶಯ ಅವರ "ಈಶ ನಿನ್ನ ಚರಣಭವನೆ" ಎನ್ನುವ ಜನಪ್ರಿಯ ಕೀರ್ತನೆಯಲ್ಲಿ ವ್ಯಕ್ತವಾಗಿದೆ:

ಈಶ ನಿನ್ನ ಚರಣಭಜನೆ । ಆಶೆಯಿಂದ ಮಾಡುವೆನು ।

ಸಿರಿಯನ್ನು ನಂಬಿ ಬದುಕಬೇಡ. ಯಾವ ಕ್ಷಣದಲ್ಲಿ ಏನಾಗುವುದೋ ಯಾರು ಬಲ್ಲರು ಎಂಬುದನ್ನು ಕನಕದಾಸರು ವ್ಯಕ್ತಪಡಿಸುವುದು ಹಿಂದೆ ಶರಣರು ಹೊನ್ನು, ಮಣ್ಣುಗಳನ್ನು ನೆಚ್ಚಿ ಬದುಕಬೇಡಿ ಎಂದಿರುವುದರ ಮುಂದುವರಿಕೆಯಾಗಿದೆ.

ನಂಬಬೇಡ ಸಿರಿಯ ತನ್ನದೆಂಬ ನಿಮಿಷಗಳಗೇನಹುದೊ

ಕನಕದಾಸರು ಬರೀ ಭ್ರಾಂತಿಯಲ್ಲಿ ಜೀವನ ಕಳೆಯುವುದನ್ನು ಬಿಟ್ಟು ದೇವನ ಮಾನಸಪೂಜೆಯಲ್ಲಿ ನಿರತರಾಗಬೇಕೆಂದು ಇಚ್ಚಿಸಿದರು:

ಗಳಿಸದಿರು ಸೀಮೆಯನು ಗಳಿಸದಿರು ದ್ರವ್ಯವನು ।
ಗಳಿಸದಿರು ನೀ ದುರಿತರಾಶಿಗಳನು॥
ನಳಿನನಾಭನ ದಿವ್ಯನಾಮವನು ನೆನೆನೆನೆದು ।
ನೆಲೆಯಾದ ಪರಮಪದವಿಯ ಪಡೆಯೋ ಮನವೆ
ನಾನಾ ಜನ್ಮದಿ ಬಂದ ನಾಟಕದ ಬೊಂಬೆಯಿದು ।
ಮಾನಕ್ಕೆ ಮೆಚ್ಚಿ ನೀ ಮರುಳಾಗದೆ ॥
ಜಾಣತನದಿಂ ಕಾಗಿನಲೆಯಾದಿಕೇಶವನ ।
ಮಾನಸದಲಿ ನೆನೆದು ಸುಖಿಯಾಗೊ ಮನವೆ
'ತೊರೆದು ಜೀವಿಸಬಹುದೆ ಹರಿ ನಿನ್ನ ಚರಣವ
ಬರಿದೆ ಮಾತೇಕಿನ್ನು ಅರಿತು ಪೇಳುವೆನಯ್ಯ'

ಎಂಬ ಪದ್ಯ ಕನಕದಾಸರ ತುಂಬ ಮನೋಹರವಾದ, ನಮ್ಮನ್ನು ಭಕ್ತಿ ಭಾವದಲ್ಲಿ ತೇಲಿಸುವಂತಹ ಪದ್ಯ. ಲೋಕದಲ್ಲಿ ಏನನ್ನಾದರೂ ತೊರೆದು ಜೀವಿಸಬಹುದು. ಆದರೆ ಭಗವಂತನ ನಾಮಸ್ಮರಣೆಯನ್ನು ಬಿಟ್ಟು ಜೀವಿಸುವುದಕ್ಕೆ ಸಾಧ್ಯವಿದೆಯೇ ಎಂದು ಅವರು ಪ್ರಶ್ನಿಸುತ್ತಾರೆ. ಶರಣಭಾವದಿಂದ ಬದುಕುವುದು ಎಷ್ಟು ಮುಖ್ಯವೆಂಬುದನ್ನು ಈ ಹಾಡು ವಿಶ್ಲೇಷಿಸುತ್ತದೆ, ಹೀಗೆ ಕನಕದಾಸರು ತಮ್ಮ ಭಕ್ತಿ ಮತ್ತು ಕಾವ್ಯಗಳ ಮೂಲಕ ಇಡೀ ನಾಡಿಗೆ ಯಾವಾಗಲೂ ಪ್ರೇರಣೆಗಳನ್ನು ಒದಗಿಸುತ್ತ ಇರುತ್ತಾರೆ.

1. ಡಾ. ಬಸು ಬೇವಿನಗಿಡದ–ಕನಕದಾಸರು ಮತ್ತು ಮಧುರಚೆನ್ನರು. ಪ್ರಥಮ ಮುದ್ರಣ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–2019 ಪುಟ– 39
2. ನಡುಗನ್ನಡ ಕಾವ್ಯ ಸಂಪದ ಕನ್ನಡ ಪಠ್ಯ ಸಂಪಾದಕರು ಶ್ರೀ ಎಂ. ಟಿ. ಉಪಾಧ್ಯ, ಡಾ. ಬಿ. ಸಿ. ಹದ್ಲಿ ಪ್ರಥಮ ಮುದ್ರಣ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–2007 ಪುಟ– 38